ಇ) ಪ್ರಾಥಮಿಕ ಆರೋಗ್ಯ ಕೇಂದ್ರಗಳು ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ದುರಸ್ತಿಗಾಗಿ ಅಂದಾಜು ರೂ. 10.00 ಲಕ್ಷಗಳ ಅನುದಾನ ಅವಶ್ಯಕತೆ ಇರುತ್ತದೆ.

ಈ) ಅನುದಾನ ಬಿಡುಗಡೆ ಮಾಡಲಾಗಿರುವುದಿಲ್ಲ.

ಉ) –ಅನ್ವಯಿಸುವುದಿಲ್ಲ–

ವಿವಿಧ ಯೋಜನೆಗಳಿಗೆ ಅನುದಾನ ಲಭ್ಯತೆ

5069 (5841); ಶ್ರೀ ಅಶೋಕ್ ಖೇಣಿ (ಬೀದರ್ ದಕ್ಷಿಣ)

ಅ) ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ 2015–16ನೇ ಸಾಲಿನಲ್ಲಿ ಯಾವ ಯಾವ ಯೋಜನೆಯ ಅಡಿಯಲ್ಲಿ ಅನುದಾನ ಬಿಡುಗಡೆಯಾಗಿದೆ; (ವಿವರ ಒದಗಿಸುವುದು)

ಆ) ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದಕ್ಕೆ ಹೊಸ ಯೋಜನೆಗಳನ್ನು ಮಂಜೂರು ಮಾಡಲಾಗಿದೆಯೇ;

ಇ) ಹೈದ್ರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಯಾಗಿರುವುದರಿಂದ ಇಲಾಖೆಯಿಂದ ಹೆಚ್ಚಿನ ಅನುದಾನ ಬಿಡುಗಡೆಯಾಗಿದೆಯೇ;

ಈ) ಹಾಗಿದ್ದಲ್ಲಿ, ಯಾವಾಗ ಬಿಡುಗಡೆಯಾಗಿದೆ;

ಉ) ಅನುದಾನ ಬಿಡುಗಡೆಯಾಗದಿದ್ದಲ್ಲಿ ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಹೆಚ್. ಆಂಜನೇಯ (ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) 2015–16 ನೇ ಸಾಲಿಗೆ ಪರಿಶಿಷ್ಟ ಜಾತಿಯ ವಸತಿ ನಿಲಯ ಹಾಗೂ ವಿದ್ಯಾರ್ಥಿಗಳ ನಿರ್ವಹಣೆಗಾಗಿ ರೂ. 15,17,500/– ಮತ್ತು ಪರಿಶಿಷ್ಟ

ಪಂಗಡದ ವಸತಿ ನಿಲಯ ಹಾಗೂ ವಿದ್ಯಾರ್ಥಿಗಳ ನಿರ್ವಹಣೆಗಾಗಿ ರೂ. 6,20,750/– ಅನುದಾನ ಬಿಡುಗಡೆಯಾಗಿರುತ್ತದೆ.

ಆ) ಹೊಸ ಯೋಜನೆಗಳ ಬಗ್ಗೆ ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲ.

ಇ), ಈ) ಮತ್ತು ಉ) ವಿಶೇಷ ಘಟಕ ಯೋಜನೆ/ಗಿರಿಜನ ಉಪಯೋಜನೆ ಯಡಿಯಲ್ಲಿ ಯೋಜನಾ ಇಲಾಖಾ ವತಿಯಿಂದ ಹೈದ್ರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ 2015ನೇ ಸಾಲಿನಲ್ಲಿ ಈ ಕೆಳಕಂಡಂತೆ ಅನುದಾನ ಒದಗಿಸಲಾಗಿದೆ.

1) ವಿ.ಘ.ಯೋ. (SCSP) – ರೂ. 98.30 ಕೋಟಿಗಳು

2) ಗಿ.ಉ.ಯೋ. (TSP) – ರೂ. 49.90 ಕೋಟಿಗಳು

ಯೋಜನಾ ಇಲಾಖೆಯಿಂದ ನಿಯಮಾನುಸಾರ ಅನುದಾನ ಬಿಡುಗಡೆಯಾಗುತ್ತಿದೆ.

ಬಿ.ಪಿ.ಎಲ್. ಕಾರ್ಡುದಾರರು

5070 (5842); ಶ್ರೀ ಅಶೋಕ್ ಖೇಣಿ (ಬೀದರ್ ದಕ್ಷಿಣ)

ಅ) ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿರುವ ಬಿಪಿಎಲ್ ಕಾರ್ಡುದಾರರ ಸಂಖ್ಯೆ ಎಷ್ಟು;

ಆ) ಹಾಗಾದರೆ, ನಕಲಿ ಕಾರ್ಡುದಾರರನ್ನು ಗುರುತಿಸಲಾಗಿದೆಯೇ; (ವಿವರ ನೀಡುವುದು);

ಇ) ಆಹಾರ ಧಾನ್ಯ ಬಡವರಿಗೆ ಸಮರ್ಪಕವಾಗಿ ಪೂರೈಕೆಯಾಗುತ್ತಿದೆಯೇ; ಇಲ್ಲವಾದ್ದಲ್ಲಿ, ಕಾರಣವೇನು; (ವಿವರ ನೀಡುವುದು);

ಈ) ಆಹಾರ ಧಾನ್ಯಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದಲ್ಲಿ ಕೈಗೊಂಡಿರುವ ಕ್ರಮವೇನು?